2019 ಕ.ತೀ.ವ 541

(ಧಾರವಾಡ ಪೀಠ)

ಸನ್ಮಾನ್ಯ ನ್ಯಾಯಮೂರ್ತಿ ಡಾ. ಹೆಚ್.ಬಿ. ಪ್ರಭಾಕರ ಶಾಸ್ತ್ರಿ

ಆನಂದ್ ಬಾಲಕೃಷ್ಣ ಅಪ್ಪುಗೋಳ್ –ವಿರುದ್ಧ–
ನಾನಾ ಧೋಂಡಿಬಾ ದೇಸಾಯಿ ಮತ್ತು ಇನ್ನೊಬ್ಬರು*

ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ 482ನೇ ಪ್ರಕರಣದ ಮೇರೆಗಿನ ಕ್ರಿಮಿನಲ್ ಅರ್ಜಿ.

ಕರ್ನಾಟಕ ಹಣಕಾಸು ಸಂಸ್ಥೆಗಳಲ್ಲಿ ಠೇವಣಿದಾರರ ಹಿತಾಸಕ್ತಿಯ ಸಂರಕ್ಷಣೆ ಅಧಿನಿಯಮ, 2004ರ 3, 4, 6, 7, 8 ಮತ್ತು 9ನೇ ಪ್ರಕರಣಗಳು.

ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ (ಇದರಲ್ಲಿ ಇನ್ನು ಮುಂದೆ ಸಂಕ್ಷಿಪ್ತವಾಗಿ 'ಕ್ರಿ.ಪ್ರ.ಸಂ.' ಎಂದು ಉಲ್ಲೇಖಿಸಲಾಗಿದೆ) 482ನೇ ಪ್ರಕರಣದ ಅಡಿಯಲ್ಲಿ, ಅರ್ಜಿದಾರರು, ಕರ್ನಾಟಕ ಹಣಕಾಸು ಸಂಸ್ಥೆಗಳಲ್ಲಿ ಠೇವಣಿದಾರರ ಹಿತಾಸಕ್ತಿಯ ಸಂರಕ್ಷಣೆ ಅಧಿನಿಯಮ, 2004ರ (ಇದರಲ್ಲಿ ಇನ್ನು ಮುಂದೆ ಸಂಕ್ಷಿಪ್ತವಾಗಿ 'ಕೆಪಿಐಡಿ ಅಧಿನಿಯಮ' ಎಂದು ಉಲ್ಲೇಖಿಸಲಾಗಿದೆ) 3, 4, 6, 7, 8 ಮತ್ತು 9 ಈ ಪ್ರಕರಣಗಳ ಅಡಿಯಲ್ಲಿ ದಂಡನೀಯವಾದ ಅಪರಾಧಕ್ಕಾಗಿ ವಿಶೇಷ ಪ್ರಕರಣ ಸಂಖ್ಯೆ: 2018ರ 14ರಲ್ಲಿ, ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಳಗಾವಿ (ಇದರಲ್ಲಿ ಇನ್ನು ಮುಂದೆ ಸಂಕ್ಷಿಪ್ತವಾಗಿ 'ವಿಶೇಷ ನ್ಯಾಯಾಲಯ' ಎಂದು ಉಲ್ಲೇಖಿಸಲಾಗಿದೆ) ಇವರ ಮುಂದೆ ಇತ್ಯರ್ಥದಲ್ಲಿರುವ ವ್ಯವಹರಣೆಗಳನ್ನು ರದ್ದುಗೊಳಿಸಲು ಕೋರಿ ಈ ಅರ್ಜಿಯನ್ನು ಸಲ್ಲಿಸಿದ್ದಾರೆ.

ದೂರುದಾರರಾದ ಪ್ರಸ್ತುತ ಪ್ರತಿವಾದಿಗಳು, ಕೆಪಿಐಡಿ ಅಧಿನಿಯಮದ 3, 4, 6, 7, 8 ಮತ್ತು 9 ಈ ಪ್ರಕರಣಗಳ ಅಡಿಯಲ್ಲಿ ದಂಡನೀಯವಾಗಿರುವ ಅಪರಾಧಕ್ಕಾಗಿ,

*ಕ್ರಿಮಿನಲ್ ಅರ್ಜಿ ಸಂ. 100819/2018, ದಿನಾಂಕ 20ನೇ ಜೂನ್, 2018.

ಸದರಿ ಅಧಿನಿಯಮದ 18ನೇ ಪ್ರಕರಣದ ಮೇರೆಗೆ, ವಿಶೇಷ ನ್ಯಾಯಾಲಯದ ಮುಂದೆ, ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಪತ್ತಿನ ಸಹಕಾರ ಸಂಘ ನಿಯಮಿತ ಹಾಗೂ ಗಜರಾಜ್ ಪತ್ತಿನ ಸಹಕಾರ ಸಂಘ ಇವುಗಳ ಪ್ರಭಾರಿಯಾಗಿರುವ ಪ್ರಸ್ತುತ ಅರ್ಜಿದಾರರು, ಸದರಿ ಸಹಕಾರ ಸಂಘಗಳಲ್ಲಿ 66,27,282/– ರೂ.ಗಳ ಮೊತ್ತವನ್ನು ಠೇವಣಿ ಇಟ್ಟಿರುವ ವಿವಿಧ ಠೇವಣಿದಾರರಿಗೆ ಸದರಿ ಮೊಬಲಗನ್ನು ಮರು–ಸಂದಾಯ ಮಾಡುವಲ್ಲಿ ವಿಫಲರಾಗಿರುವರೆಂದು ಆರೋಪಿಸಿ ಖಾಸಗಿ ದೂರನ್ನು ಸಲ್ಲಿಸಿದ್ದಾರೆ. ಇದಲ್ಲದೆ, ವಿಶೇಷ ನ್ಯಾಯಾಲಯದ ಮುಂದೆ ಆರೋಪಿಯಾಗಿರುವ ಪ್ರಸ್ತುತ ಅರ್ಜಿದಾರರು, ತಾವು ನಡೆಸುತ್ತಿರುವ ರಿಯಲ್ ಎಸ್ಟೇಟ್ ವ್ಯವಹಾರದಲ್ಲಿ, ಠೇವಣಿದಾರರಿಂದ ಸಂಗ್ರಹಿಸಿದ ಹಣವನ್ನು ಹೂಡಿಕೆ ಮಾಡಿರುವರೆಂದು ಸಹ ಆರೋಪಿಸಲಾಗಿದೆ. ಹಾಗಾಗಿ, ಸಾರ್ವಜನಿಕರು/ಹೂಡಿಕೆದಾರರು ಠೇವಣಿ ಇಟ್ಟ ಹಣವನ್ನು ಅರ್ಜಿದಾರರು ದುರುಪಯೋಗಪಡಿಸಿಕೊಂಡು, ಅವರನ್ನು ವಂಚಿಸಿದ್ದಾರೆ ಎಂದು ಹೇಳಲಾಗಿದೆ. ವಿಶೇಷ ನ್ಯಾಯಾಲಯವು, ಕೆಪಿಐಡಿ ಅಧಿನಿಯಮದ 18ನೇ ಪ್ರಕರಣದ ಅಡಿಯಲ್ಲಿ ಸದರಿ ಖಾಸಗಿ ದೂರಿನ ಸಂಜ್ಞೇಯತೆಯನ್ನು ತೆಗೆದುಕೊಂಡಿದೆ ಮತ್ತು ಪ್ರಸ್ತುತ ಅರ್ಜಿದಾರರನ್ನು ಒಳಗೊಂಡು ಅದರಲ್ಲಿ ಹೇಳಲಾದ ಆರೋಪಿಗೆ ಸಮನುಗಳನ್ನು ನೀಡಿದೆ. ವಿಶೇಷ ನ್ಯಾಯಾಲಯದ ಮುಂದೆ ಇತ್ಯರ್ಥದಲ್ಲಿರುವ ಇಡೀ ಪ್ರಕ್ರಿಯೆಯನ್ನು ರದ್ದುಗೊಳಿಸಲು ಮನವಿ ಮಾಡಿಕೊಳ್ಳುವದರೊಂದಿಗೆ, ವಿಷಯದ ಸಂಜ್ಞೇಯತೆ ತೆಗೆದುಕೊಂಡ ವಿಶೇಷ ನ್ಯಾಯಾಲಯದ ಸದರಿ ಕ್ರಮವನ್ನು ಪ್ರಸ್ತುತ ಅರ್ಜಿದಾರರು ಪ್ರಶ್ನಿಸಿದ್ದಾರೆ.

ಅರ್ಜಿದಾರರ ಪರ ಹಾಜರಾದ ಮಾನ್ಯ ನ್ಯಾಯವಾದಿಗಳು, ತಮ್ಮ ವಾದದಲ್ಲಿ ಮುಖ್ಯವಾಗಿ ಪ್ರತಿಪಾದಿಸಿದ ಏಕೈಕ ಅಂಶವೆಂದರೆ, ಕೆಪಿಐಡಿ ಅಧಿನಿಯಮದ 2(4)ನೇ ಪ್ರಕರಣದ ಮೇರೆಗೆ ಪರಿಭಾಷಿಸಿದ 'ಹಣಕಾಸು ಸಂಸ್ಥೆ'ಯ ಪರಿಭಾಷೆಯು, ರಾಜ್ಯದ ನಿಯಂತ್ರಣದಲ್ಲಿರುವ ಸಹಕಾರ ಸಂಘವನ್ನು ಹೊರಗಿಡುತ್ತದೆ ಎಂಬುದಾಗಿದೆ. ಪ್ರಸ್ತುತ ಅರ್ಜಿದಾರರು ಪ್ರಭಾರಿಯಾಗಿರುವ ಸಂಘಗಳನ್ನು ರಾಜ್ಯವು ನಿಯಂತ್ರಿಸುತ್ತಿರುವುದರಿಂದ, ಕೆಪಿಐಡಿ ಅಧಿನಿಯಮ ಅನ್ವಯವಾಗುವುದಿಲ್ಲ; ಹಾಗಾಗಿ, ವಿಶೇಷ ನ್ಯಾಯಾಲಯದ ಮುಂದೆ ಇತ್ಯರ್ಥದಲ್ಲಿರುವ ಎಲ್ಲ ವ್ಯವಹರಣೆಗಳು ರದ್ದುಗೊಳ್ಳುವುದಕ್ಕೆ ತಕ್ಕುದಾಗಿವೆ ಎಂಬುದು ಅವರ ವಾದವಾಗಿದೆ.

ಖುದ್ದಾಗಿ ಹಾಜರಾಗಿರುವ ಪಕ್ಷಕಾರರಾದ ಶ್ರೀ ನಾನಾ ಧೋಂಡಿಬಾ ದೇಸಾಯಿ, ಪ್ರತಿವಾದಿ ಸಂಖ್ಯೆ–1 ಇವರು, ತಮ್ಮ ನಿವೇದನೆಯಲ್ಲಿ, ಅರ್ಜಿದಾರ–ಸಂಘವನ್ನು ರಾಜ್ಯವು

ನಿಯಂತ್ರಿಸುತ್ತಿದೆ ಎಂದು ತೋರಿಸಲು ಯಾವುದೇ ಸಾಕ್ಷ್ಯವಿಲ್ಲವೆಂದು ನಿವೇದಿಸಿಕೊಂಡಿದ್ದಾರೆ. ಇದಲ್ಲದೆ, ಮಹಾರಾಷ್ಟ್ರ ರಾಜ್ಯದಲ್ಲಿ, ಕೆಪಿಐಡಿ ಅಧಿನಿಯಮಕ್ಕೆ ಸಂವಾದಿಯಾಗಿರುವ ಮಹಾರಾಷ್ಟ್ರ ಹಣಕಾಸು ಸಂಸ್ಥೆಗಳಲ್ಲಿ ಠೇವಣಿದಾರರ ಹಿತಾಸಕ್ತಿಯ ಸಂರಕ್ಷಣೆ ಅಧಿನಿಯಮ, 1999 (ಇದರಲ್ಲಿ ಇನ್ನು ಮುಂದೆ ಸಂಕ್ಷಿಪ್ತವಾಗಿ 'ಎಮ್‌ಪಿಐಡಿ ಅಧಿನಿಯಮ' ಎಂದು ಉಲ್ಲೇಖಿಸಲಾಗಿದೆ) ಹೆಸರಿನ ಕಾನೂನು ಜಾರಿಯಲ್ಲಿದ್ದು, ಅದು, ಕರ್ನಾಟಕದಲ್ಲಿ ಕೆಪಿಐಡಿ ಅಧಿನಿಯಮದ ಉಪಬಂಧಗಳಲ್ಲಿರುವಂಥಹುವೇ ಉಪಬಂಧಗಳನ್ನು ಹೊಂದಿದೆ. ಹಾಗಾಗಿ, ಮಹಾರಾಷ್ಟ್ರದಲ್ಲಿ ಸಹಕಾರ ಸಂಘಗಳು ಎಮ್‌ಪಿಐಡಿ ಅಧಿನಿಯಮದ ವ್ಯಾಪ್ತಿಯೊಳಗೆ ಬರುತ್ತವೆ. ಆದಾಗ್ಯೂ, ಸಹಕಾರ ಸಂಘವನ್ನು ಎಮ್‌ಪಿಎಡಿ ಅಧಿನಿಯಮದ ವ್ಯಾಪ್ತಿಯಿಂದ ಹೊರಗಿಟ್ಟಿರುವುದಿಲ್ಲವೆಂದು ತೋರಿಸಲು ಅವರು ಯಾವುದೇ ಸಾಕ್ಷ್ಯವನ್ನು ಮಂಡಿಸಿರುವುದಿಲ್ಲ.

ಪ್ರಸ್ತುತ ಅರ್ಜಿದಾರ–ಸಂಘವು ನಿಗಮಿತ ನಿಕಾಯವಾಗಿದ್ದಾಗ್ಯೂ, ಕೆಸಿಎಸ್ ಅಧಿನಿಯಮದ ಅಡಿಯಲ್ಲಿ ಸದರಿ ಸಂಘದ ಹಣಕಾಸು ಅಧಿಕಾರವು, ಅದರ ಸದಸ್ಯರ ಸಾಮಾನ್ಯ ಸಭೆಯಲ್ಲಿ ನಿಹಿತವಾಗಿದೆ ಹಾಗೂ ಕೆಸಿಎಸ್ ಅಧಿನಿಯಮದ 28ಎ ಪ್ರಕರಣದ ಅಡಿಯಲ್ಲಿ ರಚಿತವಾದ ಉಪ–ವಿಧಿಗಳ ಪರಿಭಾಷೆಯ ಪ್ರಕಾರ ರಚಿತಗೊಂಡ ವ್ಯವಸ್ಥಾಪನಾ ಸಮಿತಿಯು ಸಂಘಗಳ ಪ್ರಕಾರ್ಯಗಳನ್ನು ನಿರ್ವಹಿಸುತ್ತದೆ. ಅರ್ಜಿದಾರ–ಸಂಘಕ್ಕೆ ಸಂಬಂಧಪಡುವಷ್ಟರಮಟ್ಟಿಗೆ, ಅಂತಿಮ ಅಧಿಕಾರವು ಸಾಮಾನ್ಯ ಸಭೆಯಾಗಿದೆಯೇ ಹೊರತು, ಸಹಕಾರ ಸಂಘಗಳ ನಿಬಂಧಕರಲ್ಲ ಅಥವಾ ರಾಜ್ಯ ಸರ್ಕಾರವಲ್ಲ. ಆದುದರಿಂದ, ಅರ್ಜಿದಾರ–ಸಂಘದ ಕಾರ್ಯಚಟುವಟಿಕೆಗಳನ್ನು ಸಹಕಾರ ಸಂಘಗಳ ನಿಬಂಧಕರು ಅಥವಾ ಜಂಟಿ ನಿಬಂಧಕರು ವಿನಿಯಮಿಸುತ್ತಾರೆ ಎಂಬ ಕಾರಣ ಮಾತ್ರದಿಂದ, ಸದರಿ ವಿನಿಯಮ ಕಾರ್ಯವನ್ನು, ಯಾವುದೇ ರೀತಿಯಲ್ಲಿ, ರಾಜ್ಯವು ಸಹಕಾರ ಸಂಘವನ್ನು ನಿಯಂತ್ರಿಸುತ್ತದೆಂದು ಕೆಪಿಐಡಿ ಅಧಿನಿಯಮದ 2(4)ನೇ ಪ್ರಕರಣದ ಪರಿಭಾಷೆಯ ವ್ಯಾಪ್ತಿಯೊಳಗೆ ತಂದು, ಸಂಘದ ವ್ಯವಹಾರಗಳ ಮೇಲೆ ನೇರ ಅಥವಾ ಪರೋಕ್ಷ ನಿಯಂತ್ರಣವನ್ನು ಹೊಂದಿದೆ ಎಂದು ಹೇಳಲಾಗುವುದಿಲ್ಲ. ಹಾಗಾಗಿ, ಅರ್ಜಿದಾರ–ಸಂಘವು, ಸಹಕಾರ ಸಂಘವಾಗಿದ್ದಾಗ್ಯೂ, ಅದನ್ನು ರಾಜ್ಯ ಸರ್ಕಾರವಾಗಲಿ ಅಥವಾ ಕೇಂದ್ರ ಸರ್ಕಾರವಾಗಲಿ ನಿಯಂತ್ರಿಸುತ್ತದೆ ಎಂದಾಗುವುದಿಲ್ಲ. ಆದ್ದರಿಂದ, ಅರ್ಜಿದಾರ–ಸಂಘಕ್ಕೆ, ಕೆಪಿಐಡಿ ಅಧಿನಿಯಮ

**ಅನ್ವಯವಾಗದೆಂದು ಆರೋಪಿಸಿದ ಹಿನ್ನಲೆಯಲ್ಲಿ, ವಿಶೇಷ ನ್ಯಾಯಾಲಯವು ಸಂಜ್ಞೇಯತೆಯನ್ನು ತೆಗೆದುಕೊಂಡ ಕ್ರಮವನ್ನು ಕಾನೂನಿನ ದೃಷ್ಟಿಯಲ್ಲಿ ಒಪ್ಪಲಾಗುವುದಿಲ್ಲವೆಂದು ಅರ್ಜಿದಾರನು ತನ್ನ ಅರ್ಜಿಯಲ್ಲಿ ಮಾಡಿದ ವಾದಾಂಶದ ಕಾರಣದಿಂದ, ಕೆಪಿಐಡಿ ಅಧಿನಿಯಮದ 2(4)ನೇ ಪ್ರಕರಣದ ಅಡಿಯಲ್ಲಿ ಹಣಕಾಸು ಸಂಸ್ಥೆಯ ಪರಿಭಾಷೆಯಿಂದ ಅದನ್ನು ಹೊರಗಿಡಲಾಗಿದೆ. ತದನುಸಾರವಾಗಿ, ಅರ್ಜಿಯಲ್ಲಿ ನನಗೆ ಯಾವುದೇ ಗುಣಾರ್ಹತೆಯು ಕಂಡುಬರುತ್ತಿಲ್ಲ. ಹಾಗಾಗಿ, ಪುರಸ್ಕರಿಸುವುದಕ್ಕೆ ಸೂಕ್ತವಾಗಿಲ್ಲವೆಂಬ ಕಾರಣದಿಂದ ಅರ್ಜಿಯನ್ನು ವಜಾಗೊಳಿಸಲಾಗಿದೆ.**

***ಉಲ್ಲೇಖಿಸಲಾದ ಮೊಕದ್ದಮೆ*** ***ಪ್ಯಾರಾದಲ್ಲಿ***

1. *(2013) 10 ಎಸ್‌ಸಿಸಿ 677*
   *ಸೋಮ ಸುರೇಶ್ ಕುಮಾರ್ –ವಿರುದ್ಧ–*
   *ಆಂಧ್ರ ಪ್ರದೇಶ ಸರ್ಕಾರ ಮತ್ತು ಇತರರು (ಉಲ್ಲೇ) 12*
2. *(2013) 8 ಎಸ್‌ಸಿಸಿ 345*
   *ಬಾಲ್ಮರ್ ಲಾರೀ ಅಂಡ್ ಕಂಪನಿ ಲಿಮಿಟೆಡ್*
   *ಮತ್ತು ಇತರರು –ವಿರುದ್ಧ– ಪಾರ್ಥ ಸಾರಥಿ*
   *ಸೇನ್ ರಾಯ್ ಮತ್ತು ಇತರರು (ಉಲ್ಲೇ) 14*
3. *ಎಐಆರ್ 2013 ಎಸ್‌ಸಿ (ಪೂರಕ) 437*
   *ಥಳಪ್ಪಳಂ ಸೇವಾ ಸಹಕಾರ ಬ್ಯಾಂಕ್ ಲಿಮಿಟೆಡ್ ಮತ್ತು ಇತರರು*
   *–ವಿರುದ್ಧ– ಕೇರಳ ರಾಜ್ಯ ಸರ್ಕಾರ ಮತ್ತು ಇತರರು (ಉಲ್ಲೇ) 16*

ಅಪೀಲುದಾರರ ಪರ: ಶ್ರೀ ಹೇಮಂತ್ ಚಂದನ್‌ಗೌಡರ್, ವಕೀಲರು
ಪ್ರತ್ಯರ್ಜಿದಾರರ ಪರ: 1ನೇ ಪ್ರತ್ಯರ್ಜಿದಾರರ ಪರವಾಗಿ ಪಕ್ಷಕಾರರಾದ ಶ್ರೀ ನಾನಾ ಧೋಂಡಿಬಾ ದೇಸಾಯಿ ಅವರು ಖುದ್ದಾಗಿ ವಾದಿಸಿದ್ದಾರೆ.
2ನೇ ಪ್ರತ್ಯರ್ಜಿದಾರರ ಪರವಾಗಿ ಶ್ರೀ ಪ್ರವೀಣ್ ಕೆ. ಉಪ್ಪಾರ್, ಹೆಚ್‌ಸಿಜಿಪಿ

## ಆಜ್ಞೆ

**ನ್ಯಾಯಮೂರ್ತಿ ಡಾ. ಹೆಚ್.ಬಿ. ಪ್ರಭಾಕರ ಶಾಸ್ತ್ರಿ:**

ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ (ಇದರಲ್ಲಿ ಇನ್ನು ಮುಂದೆ ಸಂಕ್ಷಿಪ್ತವಾಗಿ 'ಕ್ರಿ.ಪ್ರ.ಸಂ.' ಎಂದು ಉಲ್ಲೇಖಿಸಲಾಗಿದೆ) 482ನೇ ಪ್ರಕರಣದ ಅಡಿಯಲ್ಲಿ, ಅರ್ಜಿದಾರರು, ಕರ್ನಾಟಕ ಹಣಕಾಸು ಸಂಸ್ಥೆಗಳಲ್ಲಿ ಠೇವಣಿದಾರರ ಹಿತಾಸಕ್ತಿಯ ಸಂರಕ್ಷಣೆ ಅಧಿನಿಯಮ, 2004ರ (ಇದರಲ್ಲಿ ಇನ್ನು ಮುಂದೆ ಸಂಕ್ಷಿಪ್ತವಾಗಿ 'ಕೆಪಿಐಡಿ ಅಧಿನಿಯಮ' ಎಂದು ಉಲ್ಲೇಖಿಸಲಾಗಿದೆ) 3, 4, 6, 7, 8 ಮತ್ತು 9 ಈ ಪ್ರಕರಣಗಳ ಅಡಿಯಲ್ಲಿ ದಂಡನೀಯವಾದ ಅಪರಾಧಕ್ಕಾಗಿ ವಿಶೇಷ ಪ್ರಕರಣ ಸಂಖ್ಯೆ: 2018ರ 14ರಲ್ಲಿ, ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಳಗಾವಿ (ಇದರಲ್ಲಿ ಇನ್ನು ಮುಂದೆ ಸಂಕ್ಷಿಪ್ತವಾಗಿ 'ವಿಶೇಷ ನ್ಯಾಯಾಲಯ' ಎಂದು ಉಲ್ಲೇಖಿಸಲಾಗಿದೆ) ಇವರ ಮುಂದೆ ಇತ್ಯರ್ಥದಲ್ಲಿರುವ ವ್ಯವಹರಣೆಗಳನ್ನು ರದ್ದುಗೊಳಿಸಲು ಕೋರಿ ಈ ಅರ್ಜಿಯನ್ನು ಸಲ್ಲಿಸಿದ್ದಾರೆ.

2. ಈ ಅರ್ಜಿಯನ್ನು ಸಲ್ಲಿಸಲು ಪ್ರಸ್ತುತ ಅರ್ಜಿದಾರರಿಗೆ ಕಾರಣವಾಗಿರುವ ಮೊಕದ್ದಮೆಯ ಸಂಕ್ಷಿಪ್ತ ವಿವರ ಹೀಗಿದೆ: ಪ್ರಸ್ತುತ ಅರ್ಜಿದಾರರು, ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ, 1959ರ (ಇದರಲ್ಲಿ ಇನ್ನು ಮುಂದೆ ಸಂಕ್ಷಿಪ್ತವಾಗಿ 'ಕೆಸಿಎಸ್ ಅಧಿನಿಯಮ' ಎಂದು ಉಲ್ಲೇಖಿಸಲಾಗಿದೆ) ಉಪಬಂಧಗಳ ಮೇರೆಗೆ ನೋಂದಾಯಿತವಾದ ಮತ್ತು ಸದರಿ ಅಧಿನಿಯಮದ ಹಾಗೂ ಅದರಡಿ ರಚಿತವಾದ ಉಪ–ವಿಧಿಗಳ ಉಪಬಂಧಗಳಿಂದ ವಿನಿಮಯಗೊಂಡ ಶ್ರೀ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಸಹಕಾರ ಸಂಘ ನಿಯಮಿತ ಇದರ ಅಧ್ಯಕ್ಷರಾಗಿರುವರೆಂದು ಹೇಳಲಾಗಿದೆ.

3. ದೂರುದಾರರಾದ ಪ್ರಸ್ತುತ ಪ್ರತಿವಾದಿಗಳು, ಕೆಪಿಐಡಿ ಅಧಿನಿಯಮದ 3, 4, 6, 7, 8 ಮತ್ತು 9 ಈ ಪ್ರಕರಣಗಳ ಅಡಿಯಲ್ಲಿ ದಂಡನೀಯವಾಗಿರುವ ಅಪರಾಧಕ್ಕಾಗಿ, ಸದರಿ ಅಧಿನಿಯಮದ 18ನೇ ಪ್ರಕರಣದ ಮೇರೆಗೆ, ವಿಶೇಷ

ನ್ಯಾಯಾಲಯದ ಮುಂದೆ, ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಪತ್ತಿನ ಸಹಕಾರ ಸಂಘ ನಿಯಮಿತ ಹಾಗೂ ಗಜರಾಜ್ ಪತ್ತಿನ ಸಹಕಾರ ಸಂಘ ಇವುಗಳ ಪ್ರಭಾರಿಯಾಗಿರುವ ಪ್ರಸ್ತುತ ಅರ್ಜಿದಾರರು, ಸದರಿ ಸಹಕಾರ ಸಂಘಗಳಲ್ಲಿ 66,27,282/– ರೂ.ಗಳ ಮೊತ್ತವನ್ನು ಠೇವಣಿ ಇಟ್ಟಿರುವ ವಿವಿಧ ಠೇವಣಿದಾರರಿಗೆ ಸದರಿ ಮೊಬಲಗನ್ನು ಮರು–ಸಂದಾಯ ಮಾಡುವಲ್ಲಿ ವಿಫಲರಾಗಿರುವರೆಂದು ಆರೋಪಿಸಿ ಖಾಸಗಿ ದೂರನ್ನು ಸಲ್ಲಿಸಿದ್ದಾರೆ. ಇದಲ್ಲದೆ, ವಿಶೇಷ ನ್ಯಾಯಾಲಯದ ಮುಂದೆ ಆರೋಪಿಯಾಗಿರುವ ಪ್ರಸ್ತುತ ಅರ್ಜಿದಾರರು, ತಾವು ನಡೆಸುತ್ತಿರುವ ರಿಯಲ್ ಎಸ್ಟೇಟ್ ವ್ಯವಹಾರದಲ್ಲಿ, ಠೇವಣಿದಾರರಿಂದ ಸಂಗ್ರಹಿಸಿದ ಹಣವನ್ನು ಹೂಡಿಕೆ ಮಾಡಿರುವರೆಂದು ಸಹ ಆರೋಪಿಸಲಾಗಿದೆ. ಹಾಗಾಗಿ, ಸಾರ್ವಜನಿಕರು/ ಹೂಡಿಕೆದಾರರು ಠೇವಣಿ ಇಟ್ಟ ಹಣವನ್ನು ಅರ್ಜಿದಾರರು ದುರುಪಯೋಗಪಡಿಸಿಕೊಂಡು, ಅವರನ್ನು ವಂಚಿಸಿದ್ದಾರೆ ಎಂದು ಹೇಳಲಾಗಿದೆ. ವಿಶೇಷ ನ್ಯಾಯಾಲಯವು, ಕೆಪಿಐಡಿ ಅಧಿನಿಯಮದ 18ನೇ ಪ್ರಕರಣದ ಅಡಿಯಲ್ಲಿ ಸದರಿ ಖಾಸಗಿ ದೂರಿನ ಸಂಜ್ಞೇಯತೆಯನ್ನು ತೆಗೆದುಕೊಂಡಿದೆ ಮತ್ತು ಪ್ರಸ್ತುತ ಅರ್ಜಿದಾರರನ್ನು ಒಳಗೊಂಡು ಅದರಲ್ಲಿ ಹೇಳಲಾದ ಆರೋಪಿಗೆ ಸಮನುಗಳನ್ನು ನೀಡಿದೆ. ವಿಶೇಷ ನ್ಯಾಯಾಲಯದ ಮುಂದೆ ಇತ್ಯರ್ಥದಲ್ಲಿರುವ ಇಡೀ ಪ್ರಕ್ರಿಯೆಯನ್ನು ರದ್ದುಗೊಳಿಸಲು ಮನವಿ ಮಾಡಿಕೊಳ್ಳುವುದರೊಂದಿಗೆ, ವಿಷಯದ ಸಂಜ್ಞೇಯತೆ ತೆಗೆದುಕೊಂಡ ವಿಶೇಷ ನ್ಯಾಯಾಲಯದ ಸದರಿ ಕ್ರಮವನ್ನು ಪ್ರಸ್ತುತ ಅರ್ಜಿದಾರರು ಪ್ರಶ್ನಿಸಿದ್ದಾರೆ.

4. 1ನೇ ಪ್ರತಿವಾದಿಯು ಖುದ್ದಾಗಿ ಮೊಕದ್ದಮೆಗೆ ಹಾಜರಾಗಿರುವ ಪಕ್ಷಕಾರರಾಗಿದ್ದಾರೆ. 2ನೇ ಪ್ರತಿವಾದಿ–ರಾಜ್ಯವನ್ನು ಮಾನ್ಯ ಉಚ್ಚ ನ್ಯಾಯಾಲಯದ ಸರ್ಕಾರಿ ಪ್ಲೀಡರ್ ಅವರು ಪ್ರತಿನಿಧಿಸಿರುವರು.

5. ಈ ವಿಷಯವನ್ನು ಸುನಾವಣೆ ನಡೆಸುವ ಪಟ್ಟಿಯಲ್ಲಿ ಸೇರಿಸಿದಾಗ್ಯೂ, ಎರಡೂ ಕಡೆಯ ಪಕ್ಷಕಾರರ ವಕೀಲರ ಸಮ್ಮತಿಯೊಂದಿಗೆ ವಿಷಯವನ್ನು ಅಂತಿಮವಾಗಿ ವಿಲೆ ಮಾಡಲು ಕೈಗೆತ್ತಿಕೊಳ್ಳಲಾಗಿದೆ.

6. ಎರಡೂ ಕಡೆಯವರ ವಾದಗಳನ್ನು ಆಲಿಸಲಾಗಿದೆ.

7. ಅರ್ಜಿದಾರರ ಪರ ಹಾಜರಾದ ಮಾನ್ಯ ನ್ಯಾಯವಾದಿಗಳು, ತಮ್ಮ ವಾದದಲ್ಲಿ ಮುಖ್ಯವಾಗಿ ಪ್ರತಿಪಾದಿಸಿದ ಏಕೈಕ ಅಂಶವೆಂದರೆ, ಕೆಪಿಐಡಿ ಅಧಿನಿಯಮದ 2(4)ನೇ ಪ್ರಕರಣದ ಮೇರೆಗೆ ಪರಿಭಾಷಿಸಿದ 'ಹಣಕಾಸು ಸಂಸ್ಥೆ'ಯ ಪರಿಭಾಷೆಯು, ರಾಜ್ಯದ ನಿಯಂತ್ರಣದಲ್ಲಿರುವ ಸಹಕಾರ ಸಂಘವನ್ನು ಹೊರಗಿಡುತ್ತದೆ ಎಂಬುದಾಗಿದೆ. ಪ್ರಸ್ತುತ ಅರ್ಜಿದಾರರು ಪ್ರಭಾರಿಯಾಗಿರುವ ಸಂಘಗಳನ್ನು ರಾಜ್ಯವು ನಿಯಂತ್ರಿಸುತ್ತಿರುವುದರಿಂದ, ಕೆಪಿಐಡಿ ಅಧಿನಿಯಮ ಅನ್ವಯವಾಗುವುದಿಲ್ಲ; ಹಾಗಾಗಿ, ವಿಶೇಷ ನ್ಯಾಯಾಲಯದ ಮುಂದೆ ಇತ್ಯರ್ಥದಲ್ಲಿರುವ ಎಲ್ಲ ವ್ಯವಹರಣೆಗಳು ರದ್ದುಗೊಳ್ಳುವುದಕ್ಕೆ ತಕ್ಕುದಾಗಿವೆ ಎಂಬುದು ಅವರ ವಾದವಾಗಿದೆ.

8. ಖುದ್ದಾಗಿ ಹಾಜರಾಗಿರುವ ಪಕ್ಷಕಾರರಾದ ಶ್ರೀ ನಾನಾ ಧೋಂಡಿಬಾ ದೇಸಾಯಿ, ಪ್ರತಿವಾದಿ ಸಂಖ್ಯೆ–1 ಇವರು, ತಮ್ಮ ನಿವೇದನೆಯಲ್ಲಿ, ಅರ್ಜಿದಾರ–ಸಂಘವನ್ನು ರಾಜ್ಯವು ನಿಯಂತ್ರಿಸುತ್ತಿದೆ ಎಂದು ತೋರಿಸಲು ಯಾವುದೇ ಸಾಕ್ಷ್ಯವಿಲ್ಲವೆಂದು ನಿವೇದಿಸಿಕೊಂಡಿದ್ದಾರೆ. ಇದಲ್ಲದೆ, ಮಹಾರಾಷ್ಟ್ರ ರಾಜ್ಯದಲ್ಲಿ, ಕೆಪಿಐಡಿ ಅಧಿನಿಯಮಕ್ಕೆ ಸಂವಾದಿಯಾಗಿರುವ ಮಹಾರಾಷ್ಟ್ರ ಹಣಕಾಸು ಸಂಸ್ಥೆಗಳಲ್ಲಿ ಠೇವಣಿದಾರರ ಹಿತಾಸಕ್ತಿಯ ಸಂರಕ್ಷಣೆ ಅಧಿನಿಯಮ, 1999 (ಇದರಲ್ಲಿ ಇನ್ನು ಮುಂದೆ ಸಂಕ್ಷಿಪ್ತವಾಗಿ 'ಎಮ್‌ಪಿಐಡಿ ಅಧಿನಿಯಮ' ಎಂದು ಉಲ್ಲೇಖಿಸಲಾಗಿದೆ) ಹೆಸರಿನ ಕಾನೂನು ಜಾರಿಯಲ್ಲಿದ್ದು, ಅದು, ಕರ್ನಾಟಕದಲ್ಲಿ ಕೆಪಿಐಡಿ ಅಧಿನಿಯಮದ ಉಪಬಂಧಗಳಲ್ಲಿರುವಂಥಹುವೇ ಉಪಬಂಧಗಳನ್ನು ಹೊಂದಿದೆ. ಹಾಗಾಗಿ, ಮಹಾರಾಷ್ಟ್ರದಲ್ಲಿ ಸಹಕಾರ ಸಂಘಗಳು ಎಮ್‌ಪಿಐಡಿ ಅಧಿನಿಯಮದ ವ್ಯಾಪ್ತಿಯೊಳಗೆ ಬರುತ್ತವೆ. ಆದಾಗ್ಯೂ, ಸಹಕಾರ ಸಂಘವನ್ನು ಎಮ್‌ಪಿಐಡಿ ಅಧಿನಿಯಮದ ವ್ಯಾಪ್ತಿಯಿಂದ ಹೊರಗಿಟ್ಟಿರುವುದಿಲ್ಲವೆಂದು ತೋರಿಸಲು ಅವರು ಯಾವುದೇ ಸಾಕ್ಷ್ಯವನ್ನು ಮಂಡಿಸಿರುವುದಿಲ್ಲ.

9. ಮಾನ್ಯ ಉಚ್ಚ ನ್ಯಾಯಾಲಯದ ಸರ್ಕಾರಿ ಪ್ಲೀಡರ್ ಅವರು, ತಮ್ಮ ವಾದದಲ್ಲಿ, ಅರ್ಜಿದಾರ–ಸಹಕಾರ ಸಂಘವು ಒಪ್ಪಿಕೊಂಡಿರುವಂತೆ, ಕೆಸಿಎಸ್ ಅಧಿನಿಯಮ, 1959ರ ಅಡಿಯಲ್ಲಿ ನೋಂದಾಯಿತವಾಗಿದೆ. ಸದರಿ ಅಧಿನಿಯಮದಡಿಯಲ್ಲಿ, ಸದರಿ ಸಂಘವು ನೋಂದಾಯಿತವಾಗುವುದು ಅಗತ್ಯವಾಗಿದ್ದಾಗ್ಯೂ, ಸದರಿ ನೋಂದಣಿ ಮತ್ತು ಸದರಿ ಸಂಘದ ಕಾರ್ಯಚಟುವಟಿಕೆಗಳನ್ನು ಸಹಕಾರ ಸಂಘಗಳ ನಿಬಂಧಕರು ತಮ್ಮ ಪದದಿಂದ ಮೇಲ್ವಿಚಾರಣೆ ಮಾಡುತ್ತಿರುವುದು, ನೋಂದಾಯಿತ ಸಹಕಾರ ಸಂಘಕ್ಕೆ ಸಂಬಂಧಿಸಿದಂತೆ ರಾಜ್ಯವು ಚಲಾಯಿಸಿದ ನಿಯಂತ್ರಣ ಎಂಬುದಾಗಿ ಕರೆಯಲಾಗುವುದಿಲ್ಲ ಎಂದು ನಿವೇದಿಸಿಕೊಂಡಿದ್ದಾರೆ. ಇದಲ್ಲದೆ ಅವರು, ಒಪ್ಪಿಕೊಂಡಿರುವಂತೆ, ಅರ್ಜಿದಾರರ ಸಂಘವು ಸಹಾಯ ಪಡೆದ ಸಂಘವಾಗಿರುವುದಿಲ್ಲವೆಂದು ನಿವೇದಿಸಿಕೊಂಡಿದ್ದಾರೆ. ಆದುದರಿಂದ, ಕೆಪಿಐಡಿ ಅಧಿನಿಯಮವು, ಅದರ ಪರಿಧಿಯಿಂದ ಅರ್ಜಿದಾರರ ಸಂಘವನ್ನು ಹೊರಗಿಡುವುದಿಲ್ಲ.

ಕೆಪಿಐಡಿ ಅಧಿನಿಯಮದ ಪ್ರಸ್ತಾವನೆಯನ್ನು ಈ ಕೆಳಗಿನಂತೆ ಓದಲಾಗಿದೆ:

"ಹಣಕಾಸು ಸಂಸ್ಥೆಗಳಲ್ಲಿ ಠೇವಣಿದಾರರ ಹಿತಾಸಕ್ತಿಯ ಸಂರಕ್ಷಣೆಗಾಗಿ ಮತ್ತು ಅದಕ್ಕೆ ಸಂಬಂಧಪಟ್ಟ ಇತರ ವಿಷಯಗಳಿಗಾಗಿ ಉಪಬಂಧ ಕಲ್ಪಿಸಲು ಒಂದು ಅಧಿನಿಯಮ.

ಹಣಕಾಸು ಸಂಸ್ಥೆಗಳಲ್ಲಿ ಠೇವಣಿದಾರರ ಹಿತಾಸಕ್ತಿಯ ಸಂರಕ್ಷಣೆಗಾಗಿ ಮತ್ತು ಅದಕ್ಕೆ ಸಂಬಂಧಪಟ್ಟ ವಿಷಯಗಳಿಗಾಗಿ ಮತ್ತು ಇದರಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಉಪಬಂಧ ಕಲ್ಪಿಸುವುದು ಯುಕ್ತವಾಗಿರುವುದರಿಂದ;"

ಕೆಪಿಐಡಿ ಅಧಿನಿಯಮದ 2(4)ನೇ ಪ್ರಕರಣವು, 'ಹಣಕಾಸು ಸಂಸ್ಥೆ'ಯನ್ನು ಈ ಕೆಳಗಿನಂತೆ ಪರಿಭಾಷಿಸುತ್ತದೆ:

> ಪ್ರಕರಣ 2(4). **'ಹಣಕಾಸು ಸಂಸ್ಥೆ'** ಎಂದರೆ, ಯಾವುದೇ ಯೋಜನೆ ಅಥವಾ ವ್ಯವಸ್ಥೆಯ ಮೇರೆಗೆ ಅಥವಾ ಇತರ ಯಾವುದೇ ರೀತಿಯಲ್ಲಿ ಠೇವಣಿಗಳನ್ನು ಸ್ವೀಕರಿಸುವ ಯಾವೊಬ್ಬ ವ್ಯಕ್ತಿ ಅಥವಾ ವ್ಯಕ್ತಿಗಳ ಗುಂಪು; ಆದರೆ, ಅದು ಯಾವುದೇ ರಾಜ್ಯ ಸರ್ಕಾರದ ಅಥವಾ ಕೇಂದ್ರ ಸರ್ಕಾರದ ಒಡೆತನದಲ್ಲಿರುವ ಅಥವಾ ಅದರ ನಿಯಂತ್ರಣದಲ್ಲಿರುವ ಒಂದು ನಿಗಮ ಅಥವಾ ಸಹಕಾರ ಸಂಘವನ್ನು ಅಥವಾ ಬ್ಯಾಂಕಿಂಗ್ ನಿಯಂತ್ರಣ ಅಧಿನಿಯಮ, 1949ರ (1949ರ ಕೇಂದ್ರ ಅಧಿನಿಯಮ 10) 5ನೇ ಪ್ರಕರಣದ (ಸಿ) ಖಂಡದ ಮೇರೆಗೆ ಪರಿಭಾಷಿಸಲಾದ ಬ್ಯಾಂಕಿಂಗ್ ಕಂಪನಿಯನ್ನು ಒಳಗೊಳ್ಳುವುದಿಲ್ಲ;"

10. ಮೇಲಿನ ಪರಿಭಾಷೆಯ ಓದುವಿಕೆಯಿಂದ, 'ಹಣಕಾಸು ಸಂಸ್ಥೆ' ಪದದ ಪರಿಭಾಷೆಯು, ರಾಜ್ಯ ಸರ್ಕಾರವಾಗಲಿ ಅಥವಾ ಕೇಂದ್ರ ಸರ್ಕಾರವಾಗಲಿ ಮಾಲೀಕತ್ವ ಹೊಂದಿರುವ ಸಹಕಾರ ಸಂಘವನ್ನು ಒಳಗೊಳ್ಳುವುದಿಲ್ಲ ಎಂಬುದು ತಿಳಿದುಬರುತ್ತದೆ. ಪ್ರಸ್ತುತ ಸಂದರ್ಭದಲ್ಲಿ, ಕೆಸಿಎಸ್ ಅಧಿನಿಯಮದ ಅಡಿಯಲ್ಲಿ ನೋಂದಾಯಿತವಾಗಿರುವ ಸಹಕಾರ ಸಂಘವಾಗಿದೆಯೆಂದು ಹೇಳಲಾಗಿರುವ ಅರ್ಜಿದಾರ–ಸಂಘವು, ರಾಜ್ಯವು ನಿಯಂತ್ರಿಸುತ್ತಿರುವ ಸಂಘವಾಗಿದೆಯೇ ಎಂಬುದನ್ನು ನೋಡಬೇಕಿದೆ.

11. ಅರ್ಜಿದಾರರ ಪರ ಮಾನ್ಯ ನ್ಯಾಯವಾದಿಗಳು, ತಮ್ಮ ವಾದಕ್ಕೆ ಪೂರಕವಾಗಿ, ಮಾನ್ಯ ಸರ್ವೋಚ್ಚ ನ್ಯಾಯಾಲಯದ ಎರಡು ತೀರ್ಪುಗಳನ್ನು ಅವಲಂಬಿಸಿದ್ದಾರೆ.

12. ಸದರಿ ಅಧಿನಿಯಮದ ಅಡಿಯಲ್ಲಿ ಈ ನ್ಯಾಯಾಲಯದ ಗಮನ ಸೆಳೆಯಲಾಗಿರುವ, ಕಂಡಿಕೆ 17ರಲ್ಲಿ, ವರದಿ ಮಾಡಿರುವ ***ಸೋಮ ಸುರೇಶ್ ಕುಮಾರ್ –ವಿರುದ್ಧ– ಆಂಧ್ರ ಪ್ರದೇಶ ಸರ್ಕಾರ ಮತ್ತು ಇತರರು***[1] ಮೊಕದ್ದಮೆಯಲ್ಲಿ, ಮಾನ್ಯ ಸರ್ವೋಚ್ಚ ನ್ಯಾಯಾಲಯವು ಈ ಕೆಳಗಿನಂತೆ ಅಭಿಪ್ರಾಯಪಟ್ಟಿದೆ:

> "17. ಅರ್ಜಿದಾರರ ಪರ ಮಾನ್ಯ ನ್ಯಾಯವಾದಿಗಳು, ವಾಸವಿ ಸಹಕಾರ ಬ್ಯಾಂಕು ನಿಯಮಿತ ಇದು, ಆಂಧ್ರ ಅಧಿನಿಯಮದ 2(ಸಿ) ಪ್ರಕರಣದ ಅಡಿಯಲ್ಲಿ, "ಹಣಕಾಸು ಸಂಸ್ಥೆ" ಪದದ ಪರಿಭಾಷೆಯ ಒಳಗೆ ಬರುವುದಿಲ್ಲ. ಆ ವಾದವನ್ನು ಒಪ್ಪಲು ಕಷ್ಟ ಎಂಬುದು ನಮ್ಮ ಅಭಿಪ್ರಾಯವಾಗಿದೆ. ಆ ಪರಿಭಾಷೆಯ ಹೊರಗಿಟ್ಟಿರುವುದು, ಕಂಪನಿಗಳ ಅಧಿನಿಯಮದ ಅಡಿಯಲ್ಲಿ ನೋಂದಾಯಿತವಾದ ಕಂಪನಿಯನ್ನು ಅಥವಾ ಯಾವುದೇ ರಾಜ್ಯ ಸರ್ಕಾರವು ಅಥವಾ ಕೇಂದ್ರ ಸರ್ಕಾರವು ಮಾಲೀಕತ್ವ ಹೊಂದಿದ ಮತ್ತು ನಿಯಂತ್ರಿಸುವ ಸಹಕಾರಿ ಸಂಸ್ಥೆಯನ್ನು ಅಥವಾ ಸಹಕಾರ ಸಂಘವನ್ನು. ಪ್ರಶ್ನೆಯಲ್ಲಿರುವ ಸಹಕಾರ ಸಂಘವು, ಆ ಪ್ರವರ್ಗದಲ್ಲಿ ಬರುವುದಿಲ್ಲ. ತತ್ಪರಿಣಾಮವಾಗಿ, ಪ್ರಶ್ನೆಯಲ್ಲಿರುವ ಸಹಕಾರಿ ಬ್ಯಾಂಕು ಸಹ, ಆಂಧ್ರ ಅಧಿನಿಯಮದ ಉಪಬಂಧಗಳಿಂದ ನಿಯಂತ್ರಿತವಾಗುತ್ತದೆ."

13. ಮೇಲಿನ ತೀರ್ಪಿನ ಓದುವಿಕೆಯಿಂದ, ಆಂಧ್ರ ಪ್ರದೇಶ ಹಣಕಾಸು ಸಂಸ್ಥೆಗಳ ಠೇವಣಿದಾರರ ಸಂರಕ್ಷಣೆ ಅಧಿನಿಯಮ, 1999ರ 2(ಸಿ) ಪ್ರಕರಣದ ಅಡಿಯಲ್ಲಿ, 'ಹಣಕಾಸು ಸಂಸ್ಥೆ' ಪದದ ಪರಿಭಾಷೆಯಲ್ಲಿನ ಸದರಿ ಅಧಿನಿಯಮದ ಉಪಬಂಧಗಳು, ರಾಜ್ಯ ಸರ್ಕಾರವು ಅಥವಾ ಕೇಂದ್ರ ಸರ್ಕಾರವು ಮಾಲಿಕತ್ವ ಹೊಂದಿದ ಮತ್ತು ನಿಯಂತ್ರಿಸುವ ಸಹಕಾರ ಸಂಘವನ್ನು, ಅದರ ಪರಿಧಿಯಿಂದ ಹೊರಗಿಟ್ಟಾಗ್ಯೂ, ನ್ಯಾಯಾಲಯದ ಮುಂದಿರುವ ಅಪೀಲುದಾರ ಸಂಸ್ಥೆಯು ಸಹಕಾರ

1. (2013) 10 ಎಸ್‌ಸಿಸಿ 677

ಸಂಘವಾಗಿತ್ತೇ ಎಂಬುದು ನ್ಯಾಯಮೂರ್ತಿಗಳ ಮುಂದಿದ್ದ ಪ್ರಶ್ನೆಯಾಗಿರಲಿಲ್ಲ ಎಂಬುದು ತಿಳಿದುಬರುತ್ತದೆ. ಒಪ್ಪಿಕೊಂಡಿರುವಂತೆಯೇ, ಅದು ಸಹಕಾರ ಬ್ಯಾಂಕು ಆಗಿತ್ತು. ಹಾಗಾಗಿ, ವಾಸವಿ ಸಹಕಾರ ಬ್ಯಾಂಕು ನಿಯಮಿತ ಇದು ಸಹಕಾರ ಬ್ಯಾಂಕು ಅಗಿದೆಯೆಂದು, ಅದು, ಆಂಧ್ರ ಪ್ರದೇಶ ಹಣಕಾಸು ಸಂಸ್ಥೆಗಳ ಠೇವಣಿದಾರರ ಸಂರಕ್ಷಣೆ ಅಧಿನಿಯಮ, 1999ರ 2(ಸಿ) ಪ್ರಕರಣದ ಪರಿಭಾಷೆಯ ವ್ಯಾಪ್ತಿಯೊಳಗೆ ಬರುತ್ತದೆ ಎಂದು ಮಾನ್ಯ ಸರ್ವೋಚ್ಚ ನ್ಯಾಯಾಲಯವು ಅಭಿಪ್ರಾಯಪಟ್ಟಿದೆ. ಆದುದರಿಂದ, "ಸಹಕಾರ ಸಂಘವು ರಾಜ್ಯದಿಂದ ನಿಯಂತ್ರಿಸಲ್ಪಟ್ಟಿದೆ" ಎಂಬ ಪ್ರಶ್ನೆ ಏನು ಇದೆಯೋ, ಅದು, ***ಸೋಮ ಸುರೇಶ್ ಕುಮಾರ್*** ಮೊಕದ್ದಮೆಯಲ್ಲಿ (ಮೇಲೆ ಹೇಳಿದೆ) ಮಾನ್ಯ ಸರ್ವೋಚ್ಚ ನ್ಯಾಯಾಲಯದ ಮುಂದಿದ್ದ ಪ್ರಶ್ನೆಯಾಗಿರಲಿಲ್ಲ ಮತ್ತು ಅರ್ಜಿದಾರರ ಪ್ರಯೋಜನವನ್ನು ಖಚಿತಪಡಿಸುವುದಿಲ್ಲ.

14. ***ಬಾಲ್ಮರ್ ಲಾರೀ ಅಂಡ್ ಕಂಪನಿ ಲಿಮಿಟೆಡ್ ಮತ್ತು ಇತರರು –ವಿರುದ್ಧ– ಪಾರ್ಥಸಾರಥಿ ಸೇನ್ ರಾಯ್ ಮತ್ತು ಇತರರು***[2] ಮೊಕದ್ದಮೆಯಲ್ಲಿ ಅರ್ಜಿದಾರರ ಪರ ಮಾನ್ಯ ನ್ಯಾಯವಾದಿಗಳು ಅವಲಂಬಿಸಿರುವ ಎರಡನೇ ತೀರ್ಪಿನಲ್ಲಿ, ಮಾನ್ಯ ನ್ಯಾಯಮೂರ್ತಿಗಳ ಮುಂದಿದ್ದ ಪ್ರಶ್ನೆಯೆಂದರೆ, ಸರ್ಕಾರಿ ಕಂಪನಿಯಾಗಿರುವುದೆಂದು ಹೇಳಲಾಗಿದ್ದ ಅಪೀಲುದಾರ ಕಂಪನಿಯು, ಭಾರತ ಸಂವಿಧಾನದ 12ನೇ ಅನುಚ್ಛೇದದ ಅಡಿಯಲ್ಲಿ ಹೇಳಲಾದ ಪರಿಭಾಷೆಯ ಒಳಗೆ ಬರುತ್ತದೆಯೇ ಎಂಬುದಾಗಿತ್ತು. ಆ ಸಂಬಂಧದಲ್ಲಿ, 24ನೇ ಕಂಡಿಕೆಯಲ್ಲಿ, ಮಾನ್ಯ ನ್ಯಾಯಮೂರ್ತಿಗಳು ಈ ಕೆಳಗಿನಂತೆ ಅಭಿಪ್ರಾಯಪಟ್ಟಿದ್ದಾರೆ:

> "24. ನಾವು "ವ್ಯಾಪಕ ನಿಯಂತ್ರಣ"ದ ಬಗ್ಗೆ ಚರ್ಚಿಸುವಾಗ, 'ನಿಯಂತ್ರಣ' ಪದವನ್ನು ತಡೆ, ನಿರ್ಬಂಧ ಅಥವಾ ಪ್ರಭಾವ ಎಂಬ ಅರ್ಥದಲ್ಲಿ ತೆಗೆದುಕೊಂಡಿದ್ದೇವೆ. ನಿಯಂತ್ರಣದ ಉದ್ದೇಶ ವಿನಿಯಮಿಸುವುದು ಮತ್ತು ತಡೆ ಒಡ್ಡುವುದು ಅಥವಾ ಕಾರ್ಯವನ್ನು ನಿರ್ಬಂಧಿಸುವುದಾಗಿದೆ. "ವಿನಿಯಮಿಸುವುದು" ಪದದ ಅರ್ಥ ನಿಯಂತ್ರಿಸುವುದು ಅಥವಾ

2. (2013) 8 ಎಸ್‌ಸಿಸಿ 345

ನಿಯಮದ ಮೂಲಕ ಸರಿಹೊಂದಿಸುವುದು ಅಥವಾ ಆಡಳಿತ ತತ್ವಗಳಿಗೆ ಒಳಪಡಿಸುವುದು ಎಂದು ಅರ್ಥ."

15. ***ಬಾಲ್ಮರ್ ಲಾರೀ ಮತ್ತು ಕಂಪನಿ ನಿಯಮಿತ*** (ಮೇಲೆ ಹೇಳಿದ) ಮೊಕದ್ದಮೆಯಲ್ಲಿನ ಮೇಲಿನ ತೀರ್ಪಿನ ತರ್ಕಸರಣಿಯನ್ನು ತೆಗೆದುಕೊಂಡರೆ, ಅರ್ಜಿದಾರರ ಪರ ಮಾನ್ಯ ನ್ಯಾಯವಾದಿಗಳು, ಪ್ರಸ್ತುತ ಮೊಕದ್ದಮೆಯಲ್ಲಿ, ಅರ್ಜಿದಾರ ಸಂಘವು ಕೆಸಿಎಸ್ ಅಧಿನಿಯಮದ ಅಡಿಯಲ್ಲಿ ನೊಂದಾಯಿತವಾಗಿರುವುದರಿಂದ ಮತ್ತು ಸಹಕಾರ ಸಂಘಗಳ ನಿಬಂಧಕರಿಗೆ ಅದರ ಲೆಕ್ಕಪರಿಶೋಧಿತ ವರದಿಯನ್ನು ಸಲ್ಲಿಸುವುದು ಅಗತ್ಯವಾಗಿರುವುದರಿಂದ, ಕೆಸಿಎಸ್ ಅಧಿನಿಯಮ, 1959ರ ಅಡಿಯಲ್ಲಿ ನಿಯಮಿಸಿದ ಕಾನೂನಿನ ಪ್ರಕಾರ ಅದರ ವ್ಯವಹಾರವನ್ನು ನಡೆಸಬೇಕಾಗಿರುವುದರಿಂದ, ಅರ್ಜಿದಾರ ಸಂಘವನ್ನು ರಾಜ್ಯ ಸರ್ಕಾರವು ನಿಯಂತ್ರಿಸುತ್ತಿದ್ದ ಸಹಕಾರ ಸಂಘವೆಂಬುದಾಗಿ ಪರಿಗಣಿಸುವುದು ಅಗತ್ಯವಾಗಿದೆ ಎಂದು ನಿವೇದಿಸಿಕೊಂಡಿದ್ದಾರೆ. ಹಾಗಾಗಿ, ಅದನ್ನು ಕೆಪಿಐಡಿ ಅಧಿನಿಯಮದ 2(4)ನೇ ಪ್ರಕರಣದ ಅಡಿಯಲ್ಲಿನ ಹಣಕಾಸು ಸಂಸ್ಥೆಗಳ ಪರಿಭಾಷೆಯಿಂದ ಹೊರಗಿಡಲಾಗಿದೆ.

16. ಅರ್ಜಿದಾರ–ಸಂಘವು, ಕೆಸಿಎಸ್ ಅಧಿನಿಯಮ, 1959ರ ಅಡಿಯಲ್ಲಿ ನೋಂದಾಯಿತವಾದ ಸಹಕಾರ ಸಂಘವೆಂಬುದರ ಬಗ್ಗೆ ಯಾವುದೇ ವಿವಾದವಿಲ್ಲ. ಒಪ್ಪಿಕೊಂಡಿರುವಂತೆಯೇ, ಅರ್ಜಿದಾರ–ಸಂಘವು ಕೆಸಿಎಸ್ ಅಧಿನಿಯಮದ ಅಡಿಯಲ್ಲಿ ಸಹವರ್ತಿ  ಸಂಘವಾಗಿರುವುದಿಲ್ಲ. ಅರ್ಜಿದಾರ ಸಂಘವು, ಅದರ ಲೆಕ್ಕಪರಿಶೋಧಿತ ಮತ್ತು ಅದರ ಲೆಕ್ಕಪತ್ರಗಳ ಸಂಬಂಧದಲ್ಲಿನ ವರದಿಗಳನ್ನು ಸಹಕಾರಿ ಸಂಘಗಳ ನಿಬಂಧಕರಿಗೆ ಸಲ್ಲಿಸುವುದು ಅಗತ್ಯವಾಗಿದ್ದಾಗ್ಯೂ, ಕೆಸಿಎಸ್ ಅಧಿನಿಯಮದ 2ಎ(6) ಪ್ರಕರಣದ ಉಪಬಂಧಗಳಿಗೆ ಮತ್ತು ಸಹಕಾರಿ ಸಂಘಗಳ ನಿಬಂಧಕರ ನಿಯಂತ್ರಣಕ್ಕೆ ಅದು ಒಳಪಡುತ್ತದೆ. ಆದಾಗ್ಯೂ, ಸಂಘವು ತನ್ನ ವ್ಯವಹಾರಗಳನ್ನು ನಡೆಸಲು ತನ್ನದೇ ಆದ ಆಡಳಿತ ಮಂಡಲಿಯನ್ನು ಹೊಂದಿದೆ ಮತ್ತು ಅದರ ಇಡೀ ಆಡಳಿತ ನಿರ್ವಹಣೆಯು, ಕೆಸಿಎಸ್ ಅಧಿನಿಯಮದ 28ಎ ಪ್ರಕರಣದ ಅಡಿಯಲ್ಲಿ ರಚನೆಗೊಂಡ ಮಂಡಲಿಯಲ್ಲಿ ನಿಹಿತವಾಗಿದೆ ಎಂಬ ಅಂಶವನ್ನು

ನಿರ್ಲಕ್ಷಿಸಲಾಗುವುದಿಲ್ಲ. ಸಂಘವು, ಅದು ರಚಿಸಿಕೊಂಡ ಉಪ–ವಿಧಿಗಳ ಅನುಸಾರವಾಗಿ ಅದರ ಕಾರ್ಯಚಟುವಟಿಕೆಗಳನ್ನು ನಡೆಸುತ್ತದೆ. ಹಾಗಾಗಿ, ಸಂಘವು, ಕಾನೂನಿನ ಅಡಿಯಲ್ಲಿ ಗುರುತಿಸಲಾದ ರೀತಿಯಲ್ಲಿ ಅದರ ವ್ಯವಹಾರಗಳನ್ನು ನಡೆಸಲು, ಮಾದರಿ ಉಪ–ವಿಧಿಗನುಸಾರವಾಗಿ ಉಪ–ವಿಧಿಯನ್ನು ರಚಿಸಿರುವುದು ಎನ್ನಲಾಗಿದೆ. ಅದರ ಆಂತರಿಕ ಆಡಳಿತ ನಿರ್ವಹಣೆ ಮತ್ತು ವ್ಯವಹಾರಗಳನ್ನು ಕೆಸಿಎಸ್ ಅಧಿನಿಯಮದ 28(ಎ) ಪ್ರಕರಣದ ಅಡಿಯಲ್ಲಿ ರಚಿಸಿದ ಆಡಳಿತ ಮಂಡಲಿಯು ನಿರ್ವಹಿಸುತ್ತದೆ ಮತ್ತು ನಿಯಂತ್ರಿಸುತ್ತದೆ. ನಿರ್ದಿಷ್ಟ ಶಾಸನದ ಅಡಿಯಲ್ಲಿ ಸಂಘವು ನೋಂದಾಯಿತವಾಗುವುದು ಅಥವಾ ವಾರ್ಷಿಕವಾಗಿ, ಸರ್ಕಾರದ ನಿರ್ದಿಷ್ಟ ಇಲಾಖೆಗೆ ಅದರ ಲೆಕ್ಕಪರಿಶೋಧಿತ ವರದಿಯನ್ನು ಸಲ್ಲಿಸುವುದು ಅಗತ್ಯವಾಗಿದೆ ಎಂಬ ಕಾರಣ ಮಾತ್ರದಿಂದ, ಸಂಘವು ರಾಜ್ಯ ಸರ್ಕಾರದ ನೇರ ನಿಯಂತ್ರಣದ ಅಡಿಯಲ್ಲಿ ಬರುತ್ತದೆ ಎಂದು ಹೇಳಲಾಗುವುದಿಲ್ಲ. ಈ ಸಂಬಂಧದಲ್ಲಿ ನಾನು, ***ಥಳಪ್ಪಳಮ್ ಸೇವಾ ಸಹಕಾರ ಬ್ಯಾಂಕ್ ನಿಯಮಿತ ಮತ್ತು ಇತರರು –ವಿರುದ್ಧ– ಕೇರಳ ರಾಜ್ಯ ಮತ್ತು ಇತರರು***[3] ಮೊಕದ್ದಮೆಯಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು ಅವಲಂಬಿಸಿದ್ದೇನೆ. ಅದರಲ್ಲಿನ 15ನೇ, 17ನೇ ಮತ್ತು 18ನೇ ಕಂಡಿಕೆಗಳಲ್ಲಿ, ಮಾನ್ಯ ಸರ್ವೋಚ್ಚ ನ್ಯಾಯಾಲಯವು ಈ ಕೆಳಗಿನಂತೆ ಅಭಿಪ್ರಾಯಪಟ್ಟಿದೆ:

> "15. ಆದುದರಿಂದ, ನಾವು, ಶಾಸನದ ಮೂಲಕ ರಚಿತವಾದ ನಿಕಾಯು ಮತ್ತು ಅಸ್ತಿತ್ವಕ್ಕೆ ಬಂದ ನಂತರ ಶಾಸನದ ಉಪಬಂಧಗಳಿಗನುಸಾರವಾಗಿ ಕಾರ್ಯನಿರ್ವಹಿಸುವ ನಿಕಾಯ ಇವೆರಡರ ನಡುವೆ ಸ್ಪಷ್ಟ ವ್ಯತ್ಯಾಸವನ್ನು ಮಾಡಬಹುದಾಗಿದೆ. ನಮಗೆ ಸಂಬಂಧಪಟ್ಟಿರುವ ಸಂಘಗಳು, ಸಹಕಾರ ಸಂಘಗಳ ಅಧಿನಿಯಮವು ನಿಯಂತ್ರಿಸುವಂಥ ತರುವಾಯದ ಪ್ರವರ್ಗದ ಅಡಿಯಲ್ಲಿ ಬರುತ್ತವೆ ಮತ್ತು ಅವು ಶಾಸನಾತ್ಮಕ ನಿಕಾಯಗಳಲ್ಲ, ಆದರೆ, ಕೇರಳ ಸಹಕಾರಿ

3. ಎಐಆರ್ 2013 ಎಸ್‌ಸಿ (ಪೂರಕ) 437

ಸಂಘಗಳ ಅಧಿನಿಯಮದ 9ನೇ ಪ್ರಕರಣದ ಅರ್ಥ ವ್ಯಾಪ್ತಿಯೊಳಗೆ, ನಿರಂತರ ಉತ್ತರಾಧಿಕಾರ ಮತ್ತು ಸಾಮಾನ್ಯ ಮೊಹರು ಹೊಂದಿರುವ ನಿಗಮಿತ ನಿಕಾಯ ಮಾತ್ರವಾಗಿವೆ; ಹಾಗಾಗಿ, ಸ್ವತ್ತನ್ನು ಧಾರಣ ಮಾಡುವ, ಕರಾರು ಮಾಡಿಕೊಳ್ಳುವ, ದಾವೆಗಳನ್ನು ಹಾಗೂ ಇತರ ಕಾನೂನು ವ್ಯವಹರಣೆಗಳನ್ನು ಹೂಡುವ ಮತ್ತು ಅವುಗಳಿಗೆ ಪ್ರತಿವಾದಿಸುವ ಹಾಗೂ ಯಾವ ಉದ್ದೇಶಕ್ಕಾಗಿ ಅದನ್ನು ರಚಿಸಲಾಗಿತ್ತೋ, ಆ ಉದ್ದೇಶಕ್ಕೆ ಅವಶ್ಯವಾಗಿರುವ ಎಲ್ಲ ಕಾರ್ಯಗಳನ್ನು ಮಾಡುವ ಅಧಿಕಾರ ಹೊಂದಿವೆ. ಸಂಘಗಳ ಅಧಿನಿಯಮದ 27ನೇ ಪ್ರಕರಣವು, ಸಂಘದ ಅಂತಿಮ ಅಧಿಕಾರವು, ಅದರ ಸದಸ್ಯರ ಸಾಮಾನ್ಯ ಸಭೆಯಲ್ಲಿ ನಿಹಿತಗೊಳ್ಳುತ್ತದೆ ಎಂದು ಹಾಗೂ ಪ್ರತಿಯೊಂದು ಸಂಘವನ್ನು, ಸಂಘಗಳ ಅಧಿನಿಯಮದ 28ನೇ ಪ್ರಕರಣದ ಅಡಿಯಲ್ಲಿ ಉಪಬಂಧಿಸಲಾದಂತೆ, ಉಪ–ವಿಧಿಗಳ ನಿಬಂಧನೆಗಳಲ್ಲಿ ರಚಿಸಲಾದ ವ್ಯವಸ್ಥಾಪನಾ ಸಮಿತಿಯು ನಿರ್ವಹಿಸುತ್ತದೆ ಎಂದು ನಿರಪೇಕ್ಷವಾಗಿ ಹೇಳುತ್ತದೆ. ಇಂಥ ವಿಧದ ಸಂಘಗಳಿಗೆ ಸಂಬಂಧಪಡುವಷ್ಟರಮಟ್ಟಿಗೆ, ಅಂತಿಮ ಅಧಿಕಾರವು, ಶಾಸನವು ಹೇಳುವಂತೆ, ಸಾಮಾನ್ಯ ಸಭೆಯಾಗಿದೆಯೇ ಹೊರತು, ಸಹಕಾರ ಸಂಘಗಳ ನಿಬಂಧಕರಾಗಲಿ ಅಥವಾ ರಾಜ್ಯ ಸರ್ಕಾರವಾಗಲಿ ಅಲ್ಲ.

17. ನಿಸ್ಸಂದೇಹವಾಗಿ, ಸಂಘಗಳು, ನಿಬಂಧಕರು, ಜಂಟಿ ನಿಬಂಧಕರು, ಸರ್ಕಾರ ಮುಂತಾದಂಥ ಶಾಸನಾತ್ಮಕ ಪ್ರಾಧಿಕಾರಿಗಳ ನಿಯಂತ್ರಣಕ್ಕೆ ಒಳಪಡುತ್ತವೆಯಾದರೂ, ಸಂಪೂರ್ಣ ಮತ್ತು ಸರ್ವವ್ಯಾಪಕವಾಗಿರುವ ಸಂಘದ ವ್ಯವಹಾರಗಳ ಮೇಲೆ ಯಾವುದೇ ನೇರ ಅಥವಾ ಪರೋಕ್ಷ ನಿಯಂತ್ರಣವನ್ನು ರಾಜ್ಯವು ಚಲಾಯಿಸುತ್ತದೆ ಎಂದು ಹೇಳಲಾಗುವುದಿಲ್ಲ. ನಿಗಮಿತ ನಿಕಾಯಗಳಾಗಿರುವ ಸಹಕಾರಿ ಸಂಘಗಳ ಮೇಲೆ, ಶಾಸನದ ಮೇರೆಗೆ ಮೇಲ್ವಿಚಾರಣಾ ಅಥವಾ

ಸಾಮಾನ್ಯ ಆಡಳಿತ ನಿಯಂತ್ರಣವು, ಅದನ್ನು "ರಾಜ್ಯ"ದ ಅಥವಾ ರಾಜ್ಯದ ಸಾಧನತ್ವದ ಅರ್ಥವ್ಯಾಪ್ತಿಯೊಳಗೆ ತರಲು, ರಾಜ್ಯದ ಅಂಥ ನಿಯಂತ್ರಣಕ್ಕೆ ಒಳಪಡುತ್ತದೆ ಎಂದು ವಿನಿಯಮಿಸುವ ಸಲುವಾಗಿನ ನಿಕಾಯದ ಕಾರ್ಯಚಟುವಟಿಕೆಗಳೆಂದಾಗುವುದಿಲ್ಲ. ಮೇಲಿನ ತತ್ವವನ್ನು, ಎಸ್.ಎಸ್. ರಾಣಾ –ವಿರುದ್ಧ– ಸಹಕಾರ ಸಂಘಗಳ ನಿಬಂಧಕರು ಮತ್ತು ಇನ್ನೊಬ್ಬರು (2006) 11 ಎಸ್‌ಸಿಸಿ 634: (2006) ಎಐಆರ್ ಎಸ್‌ಸಿಡಬ್ಲ್ಯು 3723) ಮೊಕದ್ದಮೆಯಲ್ಲಿ ಈ ನ್ಯಾಯಾಲಯವು ಅನುಮೋದಿಸಿದೆ. ಆ ಮೊಕದ್ದಮೆಯಲ್ಲಿ, ಹಿಮಾಚಲ ಪ್ರದೇಶ ಸಹಕಾರಿ ಸಂಘಗಳ ಅಧಿನಿಯಮ, 1968ರ ಉಪಬಂಧಗಳ ಅಡಿಯಲ್ಲಿ ನೋಂದಾಯಿತ ಸಂಘವಾಗಿರುವ ಕಾಂಗ್ರಾ ಕೇಂದ್ರೀಯ ಸಹಕಾರಿ ಸಂಘ ಬ್ಯಾಂಕ್ ನಿಯಮಿತದ ವಿರುದ್ಧದ ರಿಟ್ ಅರ್ಜಿಯ ಸಮರ್ಥನೀಯತೆಯನ್ನು ಕುರಿತು ಈ ನ್ಯಾಯಾಲಯವು ವ್ಯವಹರಿಸಿತ್ತು. ಹಿಮಾಚಲ ಪ್ರದೇಶ ಸಹಕಾರಿ ಸಂಘಗಳ ಅಧಿನಿಯಮದ ವಿವಿಧ ಉಪಬಂಧಗಳನ್ನು ಪರಿಶೀಲಿಸಿದ ನಂತರ, ಈ ನ್ಯಾಯಾಲಯವು ಈ ಕೆಳಗಿನಂತೆ ಅಭಿಪ್ರಾಯಪಟ್ಟಿದೆ (ಎಐಆರ್ ಎಸ್‌ಸಿಡಬ್ಲ್ಯು ಇದರ 9ನೇ ಕಂಡಿಕೆ):

"9. ಸಂಘವು, ಸದರಿ ಅಧಿನಿಯಮದ ಅಡಿಯಲ್ಲಿ ರಚಿತವಾಗಿದೆ ಎಂಬ ಬಗ್ಗೆ ಯಾವುದೇ ವಿವಾದವಿಲ್ಲ. ಸಂಘದ ಉಪ–ವಿಧಿಗಳಲ್ಲಿ ಉಪಬಂಧಿಸಿದುದನ್ನು ಹೊರತುಪಡಿಸಿ, ಮುಖ್ಯವಾಗಿ ಅದರ ಪ್ರಕಾರ್ಯಗಳು, ಇತರ ಯಾವುದೇ ಸಹಕಾರ ಸಂಘದಂತೆಯೇ, ಅಧಿನಿಯಮದ ಉಪಬಂಧಗಳ ನಿಬಂಧನೆಗಳಿಂದ ವಿನಿಯಮಗೊಂಡಿವೆ. ಸಂಘದ ಪ್ರಕಾರ್ಯಗಳಲ್ಲಿ ರಾಜ್ಯವು ಹೇಳುವುದೇನೂ ಇಲ್ಲ. ಸದಸ್ಯತ್ವ, ಷೇರುಗಳ ಆರ್ಜನೆ ಮತ್ತು ಎಲ್ಲ ಇತರ ವಿಷಯಗಳನ್ನು, ಅಧಿನಿಯಮದ ಅಡಿಯಲ್ಲಿ

ರಚಿತವಾದ ಉಪ–ವಿಧಿಗಳ ಮೂಲಕವೇ ನಿರ್ವಹಿಸಲಾಗುತ್ತಿದೆ. ಸಹಕಾರ ಸಂಘದ ಅಧಿಕಾರಿಯ ನಿಬಂಧನೆಗಳು ಮತ್ತು ಷರತ್ತುಗಳು, ಅವಿವಾದಿತವಾಗಿ, ನಿಯಮಗಳಿಂದ ನಿಯಂತ್ರಿತವಾಗುತ್ತವೆ. ಶ್ರೀ ವಿಜಯ್ ಕುಮಾರ್ ಅವರು ಉಲ್ಲೇಖಿಸಿದ 56ನೇ ನಿಯಮವು, ಸಂಘದ ಅಧಿಕಾರಿಯ ಮೇಲೆ ಹಾಗೆ ಪ್ರದತ್ತವಾದ ಯಾವುದೇ ಕಾನೂನು ಹಕ್ಕು ಅದರ ನಿಬಂಧನೆಗಳಲ್ಲಿನ ಯಾವುದೇ ಉಪಬಂಧವನ್ನು ಒಳಗೊಳ್ಳುವುದಿಲ್ಲ.

10. ಸಂಪೂರ್ಣ ಮತ್ತು ವ್ಯಾಪಕ ನಿಯಂತ್ರಣಕ್ಕಾಗಿ, ಸಂಘದ ವ್ಯವಹಾರಗಳ ಮೇಲೆ ಯಾವುದೇ ನೇರ ಅಥವಾ ಪರೋಕ್ಷ ನಿಯಂತ್ರಣವನ್ನು ರಾಜ್ಯವು ಚಲಾಯಿಸುತ್ತಿದೆ ಎಂಬುದನ್ನು ನಮಗೆ ತೋರಿಸಿಕೊಟ್ಟಿರುವುದಿಲ್ಲ. ಇದಲ್ಲದೆ, ರಾಜ್ಯವು ಬಹುಸಂಖ್ಯೆಯ ಷೇರುದಾರನೂ ಅಲ್ಲ. ಒಬ್ಬ ನಿರ್ದೇಶಕನನ್ನು ನಾಮನಿರ್ದೇಶಿಸುವ ಅಧಿಕಾರವನ್ನು ಮಾತ್ರ ರಾಜ್ಯವು ಹೊಂದಿದೆ. ಹಾಗಾಗಿ, ಬಹುಸಂಖ್ಯೆಯ ನಿರ್ದೇಶಕರನ್ನು ರಾಜ್ಯವು ನಾಮನಿರ್ದೇಶಿಸುತ್ತದೆ ಎಂಬ ಭಾವದಲ್ಲಿ ಸಂಘದ ವ್ಯವಹಾರಗಳ ಮೇಲೆ ಯಾವುದೇ ಕಾರ್ಯಾತ್ಮಕ ನಿಯಂತ್ರಣವನ್ನು ರಾಜ್ಯವು ಚಲಾಯಿಸಿದೆ ಎಂದು ಹೇಳಲಾಗುವುದಿಲ್ಲ. ಸಂಘದ ಮೇಲೆ ರಾಜ್ಯವು ಸಂಪೂರ್ಣ ಮತ್ತು ವ್ಯಾಪಕ ನಿಯಂತ್ರಣವನ್ನು ಹೊಂದಿದೆ ಎಂಬ ನಿರ್ಣಯಕ್ಕೆ ಬರಲು, ಹಲವು ಇತರ ಸುಸಂಗತ ಪ್ರಶ್ನೆಗಳನ್ನು ಪರಿಗಣಿಸಬೇಕಾದ ಅಗತ್ಯವಿದೆ, ಅವುಗಳೆಂದರೆ – (1) ಸಂಘವನ್ನು ಹೇಗೆ ಸೃಜಿಸಲಾಗಿದೆ? (2) ಅದು ಯಾವುದೇ ಏಕಸ್ವಾಮ್ಯ ಲಕ್ಷಣವನ್ನು ಹೊಂದಿದೆಯೇ? (3) ಶಾಸನಾತ್ಮಕ ಪ್ರಕಾರ್ಯಗಳಲ್ಲಿ ಅಥವಾ ಸಾರ್ವಜನಿಕ ಪ್ರಕಾರ್ಯಗಳಲ್ಲಿ ಸಂಘದ ಪ್ರಕಾರ್ಯಗಳು ಪಾಲು

ಹೊಂದಿವೆಯೇ? ಮತ್ತು (4) ಅದನ್ನು ಸಾರ್ವಜನಿಕ ಪ್ರಾಧಿಕಾರವೆಂದು ನಿರೂಪಿಸಬಹುದೇ?

11. 2ನೇ ಪ್ರತ್ಯರ್ಜಿದಾರ–ಸಂಘವು, ಮೇಲೆ ಹೇಳಿದ ಪ್ರಶ್ನೆಗಳಲ್ಲಿ ಯಾವೊಂದಕ್ಕೂ ಉತ್ತರಿಸುವುದಿಲ್ಲ. ಶಾಸನಾತ್ಮಕವಲ್ಲದ ಸಂಘದ ಸಂದರ್ಭದಲ್ಲಿ, ಅದರ ಮೇಲಿನ ನಿಯಂತ್ರಣ ಎಂದರೆ, ಅಜಯ್ ಹಾಸಿಯಾ –ವಿರುದ್ಧ– ಖಾಲಿದ್ ಮುಜೀಬ್ ಸೆಹ್ರವರ್ದಿ (ಎಐಆರ್ 1981 ಎಸ್‌ಸಿ 487) ಮೊಕದ್ದಮೆಯಲ್ಲಿ, ಈ ನ್ಯಾಯಾಲಯವು ವಿಧಿಸಿದ ಪರೀಕ್ಷೆಗಳನ್ನು ಅದು ಈಡೇರಿಸಬೇಕೆಂಬುದಾಗಿದೆ. [ಝೋರಾಷ್ಟ್ರಿಯನ್ ಕೊ–ಆಪರೇಟಿವ್ ಹೌಸಿಂಗ್ ಸೊಸೈಟಿ ಲಿಮಿಟೆಡ್ –ವಿರುದ್ಧ– ಜಿಲ್ಲಾ ಸಹಕಾರ ಸಂಘಗಳ ನಿಬಂಧಕರು (ನಗರ) (2005 ಎಐಆರ್ ಎಸ್‌ಸಿಡಬ್ಲ್ಯು 2317) ನೋಡಿ].

12. ಕಂಪನಿಗಳ ಅಧಿನಿಯಮ ಅಥವಾ ಸಹಕಾರ ಸಂಘಗಳ ಅಧಿನಿಯಮದಂಥ ಅಧಿನಿಯಮಗಳ ಅಡಿಯಲ್ಲಿನ ಸಾಮಾನ್ಯ ವಿನಿಯಮಗಳು, ರಾಜ್ಯದ ನಿಯಂತ್ರಣಕ್ಕೆ ಒಳಪಡುವಂತೆ ಕಂಪನಿಯ ಅಥವಾ ಸಂಘದ ಕಾರ್ಯಚಟುವಟಿಕೆಗಳನ್ನು ಒಳಪಡಿಸುವುದಿಲ್ಲ ಎಂಬುದು ಇತ್ಯರ್ಥವಾದ ವಿಷಯವಾಗಿದೆ. ಅಧಿನಿಯಮದ ಉಪಬಂಧಗಳ ಪರಿಭಾಷೆಯಲ್ಲಿ ಅಂಥ ನಿಯಂತ್ರಣವು, ಸಂಘದ ಸೂಕ್ತ ಕಾರ್ಯನಿರ್ವಹಣೆಯನ್ನು ಸುನಿಶ್ಚಿತಗೊಳಿಸುವ ಉದ್ದೇಶ ಹೊಂದಿರುತ್ತದೆ ಹಾಗೂ ರಾಜ್ಯ ಅಥವಾ ಶಾಸನಾತ್ಮಕ ಪ್ರಾಧಿಕಾರಗಳು, ಅವುಗಳ ದೈನಂದಿನ ಪ್ರಕಾರ್ಯಗಳ ಸಂಬಂಧದಲ್ಲಿ ಮಾಡುವಂಥದ್ದೇನು ಇರುವುದಿಲ್ಲ.

18. ವಾಸ್ತವ ಸಂಗತಿಗಳ ಆಧಾರದ ಮೇಲೆ, ನಾವು ಈ ಅಪೀಲುಗಳಿಗೆ ಸಂಬಂಧಪಟ್ಟಿರುವ ಸಹಕಾರ ಸಂಘಗಳು,

ಸಂವಿಧಾನದ 12ನೇ ಅನುಚ್ಛೇದ ಅರ್ಥವ್ಯಾಪ್ತಿಯೊಳಗೆ "ರಾಜ್ಯ" ಅಥವಾ "ರಾಜ್ಯದ ಸಾಧನತ್ವಗಳ" ಅಭಿವ್ಯಕ್ತಿಯೊಳಗೆ ಬರುವುದಿಲ್ಲವೆಂದು; ಮತ್ತು ಆದರಿಂದಾಗಿ, ಸಂವಿಧಾನದ ಭಾಗ–IIIರಲ್ಲಿ ಪ್ರತಿಸ್ಥಾಪಿಸಿರುವಂತೆ ಎಲ್ಲಾ ಸಾಂವಿಧಾನಿಕ ಪರಿಮಿತಿಗಳಿಗೆ ಒಳಪಡುವುದಿಲ್ಲವೆಂದು ನಿರ್ಣಯಿಸುತ್ತೇವೆ. ಆದಾಗ್ಯೂ, ರಾಜ್ಯ ಅಥವಾ ಸಾಧನತ್ವವಾಗಿರದಿದ್ದಾಗ್ಯೂ, ನಿಕಾಯ ಅಥವಾ ಸಂಸ್ಥೆಯಾಗಿರುವ ಸನ್ನಿವೇಶಗಳನ್ನು ನಾವು ದಾಟಿ ಬರಬಹುದಾಗಿದೆ; ತೀರ್ಪಿನ ತರುವಾಯದ ಭಾಗದಲ್ಲಿ ನಾವು ಚರ್ಚಿಸಬಹುದಾದ ಸಂಗತಿಯಾಗಿರುವ ಅಧಿನಿಯಮದ 2(ಹೆಚ್) ಪ್ರಕರಣದ ಅರ್ಥವ್ಯಾಪ್ತಿಯೊಳಗೆ, ಸಾರ್ವಜನಿಕ ಪ್ರಾಧಿಕಾರದ ಪರಿಭಾಷೆಯನ್ನು ಅವು ಆಗಲೂ ಪೂರೈಸದಿರಬಹುದು."

17. ಮೇಲಿನ ಅಭಿಪ್ರಾಯಗಳನ್ನು ಓದುವುದರಿಂದ, ಪ್ರಸ್ತುತ ಅರ್ಜಿದಾರ ಸಂಘವು ನಿಗಮಿತ ನಿಕಾಯವಾಗಿದ್ದಾಗ್ಯೂ, ಕೆಸಿಎಸ್ ಅಧಿನಿಯಮದ ಅಡಿಯಲ್ಲಿ ಸದರಿ ಸಂಘದ ಹಣಕಾಸು ಅಧಿಕಾರವು, ಅದರ ಸದಸ್ಯರ ಸಾಮಾನ್ಯ ಸಭೆಯಲ್ಲಿ ನಿಹಿತವಾಗಿದೆ ಹಾಗೂ ಕೆಸಿಎಸ್ ಅಧಿನಿಯಮದ 28ಎ ಪ್ರಕರಣದ ಅಡಿಯಲ್ಲಿ ರಚಿತವಾದ ಉಪ–ವಿಧಿಗಳ ಪರಿಭಾಷೆಯ ಪ್ರಕಾರ ರಚಿತಗೊಂಡ ವ್ಯವಸ್ಥಾಪನಾ ಸಮಿತಿಯು ಸಂಘಗಳ ಪ್ರಕಾರ್ಯಗಳನ್ನು ನಿರ್ವಹಿಸುತ್ತದೆ. ಅರ್ಜಿದಾರ–ಸಂಘಕ್ಕೆ ಸಂಬಂಧಪಡುವಷ್ಟರಮಟ್ಟಿಗೆ, ಅಂತಿಮ ಅಧಿಕಾರವು ಸಾಮಾನ್ಯ ಸಭೆಯಾಗಿದೆಯೇ ಹೊರತು, ಸಹಕಾರ ಸಂಘಗಳ ನಿಬಂಧಕರಲ್ಲ ಅಥವಾ ರಾಜ್ಯ ಸರ್ಕಾರವಲ್ಲ. ಆದುದರಿಂದ, ಅರ್ಜಿದಾರ–ಸಂಘದ ಕಾರ್ಯಚಟುವಟಿಕೆಗಳನ್ನು ಸಹಕಾರ ಸಂಘಗಳ ನಿಬಂಧಕರು ಅಥವಾ ಜಂಟಿ ನಿಬಂಧಕರು ವಿನಿಯಮಿಸುತ್ತಾರೆ ಎಂಬ ಕಾರಣ ಮಾತ್ರದಿಂದ, ಸದರಿ ವಿನಿಯಮ ಕಾರ್ಯವನ್ನು, ಯಾವುದೇ ರೀತಿಯಲ್ಲಿ, ರಾಜ್ಯವು ಸಹಕಾರ ಸಂಘವನ್ನು ನಿಯಂತ್ರಿಸುತ್ತದೆಂದು ಕೆಪಿಐಡಿ ಅಧಿನಿಯಮದ 2(4)ನೇ ಪ್ರಕರಣದ ಪರಿಭಾಷೆಯ ವ್ಯಾಪ್ತಿಯೊಳಗೆ ತಂದು, ಸಂಘದ ವ್ಯವಹಾರಗಳ ಮೇಲೆ ನೇರ ಅಥವಾ ಪರೋಕ್ಷ ನಿಯಂತ್ರಣವನ್ನು ಹೊಂದಿದೆ ಎಂದು

ಹೇಳಲಾಗುವುದಿಲ್ಲ. ಹಾಗಾಗಿ, ಅರ್ಜಿದಾರ–ಸಂಘವು, ಸಹಕಾರ ಸಂಘವಾಗಿದ್ದಾಗ್ಯೂ, ಅದನ್ನು ರಾಜ್ಯ ಸರ್ಕಾರವಾಗಲಿ ಅಥವಾ ಕೇಂದ್ರ ಸರ್ಕಾರವಾಗಲಿ ನಿಯಂತ್ರಿಸುತ್ತದೆ ಎಂದಾಗುವುದಿಲ್ಲ. ಆದ್ದರಿಂದ, ಅರ್ಜಿದಾರ–ಸಂಘಕ್ಕೆ, ಕೆಪಿಐಡಿ ಅಧಿನಿಯಮ ಅನ್ವಯವಾಗದೆಂದು ಆರೋಪಿಸಿದ ಹಿನ್ನಲೆಯಲ್ಲಿ, ವಿಶೇಷ ನ್ಯಾಯಾಲಯವು ಸಂಜ್ಞೇಯತೆಯನ್ನು ತೆಗೆದುಕೊಂಡ ಕ್ರಮವನ್ನು ಕಾನೂನಿನ ದೃಷ್ಟಿಯಲ್ಲಿ ಒಪ್ಪಲಾಗುವುದಿಲ್ಲವೆಂದು ಅರ್ಜಿದಾರನು ತನ್ನ ಅರ್ಜಿಯಲ್ಲಿ ಮಾಡಿದ ವಾದಾಂಶದ ಕಾರಣದಿಂದ, ಕೆಪಿಐಡಿ ಅಧಿನಿಯಮದ 2(4)ನೇ ಪ್ರಕರಣದ ಅಡಿಯಲ್ಲಿ ಹಣಕಾಸು ಸಂಸ್ಥೆಯ ಪರಿಭಾಷೆಯಿಂದ ಅದನ್ನು ಹೊರಗಿಡಲಾಗಿದೆ. ತದನುಸಾರವಾಗಿ, ಅರ್ಜಿಯಲ್ಲಿ ನನಗೆ ಯಾವುದೇ ಗುಣಾರ್ಹತೆಯು ಕಂಡುಬರುತ್ತಿಲ್ಲ. ಹಾಗಾಗಿ, ಪುರಸ್ಕರಿಸುವುದಕ್ಕೆ ಸೂಕ್ತವಾಗಿಲ್ಲವೆಂಬ ಕಾರಣದಿಂದ ಅರ್ಜಿಯನ್ನು ವಜಾಗೊಳಿಸಲಾಗಿದೆ.

18. ಮುಖ್ಯ ಅರ್ಜಿಯ ದೃಷ್ಟಿಯಿಂದ, ಮಧ್ಯಕಾಲೀನ ಅರ್ಜಿ ಸಂಖ್ಯೆ: 1/2018 ಇದು ಪರಿಗಣನೆಗೆ ಊರ್ಜಿತವಾಗುವುದಿಲ್ಲ.

---